ಅ) ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಬಡ್ತಿ/ನೇಮಕಾತಿ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಪ್ರಕಟಣೆ

ಅಧ್ಯಕ್ಷರು : ವಿಧಾನಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಈ ಕೆಳಕಂಡ ಸಂದೇಶವು ಬಂದಿರುತ್ತದೆ. ಕರ್ನಾಟಕ ವಿಧಾನಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮಗಳ 118ರ ಮೇರೆಗೆ ದಿನಾಂಕ 8.7.1999ರಂದು ವಿಧಾನಪರಿಷತ್ತು ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ವಿಧೇಯಕ, 1999ಅನ್ನು ಯಾವುದೇ ತಿದ್ದುಪಡಿಗಳಿಲ್ಲದೆ ಅಂಗೀಕರಿಸಿದೆ ಎಂದು ಈ ಮೂಲಕ ತಿಳಿಸುತ್ತಿದ್ದೇನೆ ಹಾಗೂ ಈ ವಿಧಾನಸಭೆಯು ಇದಕ್ಕೆ ಸಹಮತವನ್ನು ನೀಡಬೇಕೆಂದು ಕೋರುತ್ತೇನೆ.

ಸಭೆಯ ಮುಂದಿಡಲಾದ ಕಾಗದಪತ್ರಗಳು

ಕಾರ್ಯದರ್ಶಿಯವರು : ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದಿಡುತ್ತೇನೆ

1. ಕರ್ನಾಟಕ ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕ, 1999.
2. ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಹೊರ ಹಾಕುವ) (ಎರಡನೇ) ತಿದ್ದುಪಡಿ ವಿಧೇಯಕ, 1999.
3. ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 1999.
4. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ (ತಿದ್ದುಪಡಿ), ವಿಧೇಯಕ, 1999.
5. ಕನ್ನಡ ವಿಶ್ವವಿದ್ಯಾನಿಲಯ (ತಿದ್ದುಪಡಿ) ವಿಧೇಯಕ, 1999.
6. ಶ್ರೀ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 1999.
7. ಕರ್ನಾಟಕ ಅಂತರ್ಜಲ (ಕುಡಿಯುವ ನೀರಿನ ಮೂಲಗಳ ಸಂರಕ್ಷಣೆಗಾಗಿ ನಿಯಂತ್ರಣ) ವಿಧೇಯಕ, 1999

ಅಧ್ಯಕ್ಷರು : ಮಂಡಿಸಲಾಯಿತು.

I. ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) : ಶ್ರೀ ಜೆ.ಹೆಚ್. ಪಟೇಲ್ (ಮುಖ್ಯಮಂತ್ರಿ) ರವರ ಪರವಾಗಿ :

1958ರ ವಿದ್ಯುತ್ ಅಧಿನಿಯಮದ 69(5)(ಎ) ಪ್ರಕರಣದ ಮೇರೆಗೆ, 1997-98ನೇ ಸಾಲಿಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

II. ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) : ಶ್ರೀ ಸಿದ್ದರಾಮಯ್ಯ (ಉಪಮುಖ್ಯ ಮಂತ್ರಿ) ಅವರ ಪರವಾಗಿ :

1951ರ ರಾಜ್ಯ ಹಣಕಾಸು ಸಂಸ್ಥೆಗಳ ಅಧಿನಿಯಮದ 37(7)ನೇ ಪ್ರಕರಣದ ಮೇರೆಗೆ, 1997-98ನೇ ಸಾಲಿನ ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸುತ್ತೇನೆ.

III. ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ವಾರ್ತಾ ಮಂತ್ರಿ) ಅವರ ಪರವಾಗಿ :

1993ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮದ 262(3)ನೇ ಪ್ರಕರಣದ ಮೇರೆಗೆ.

1. 1996-97ನೇ ಸಾಲಿನ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕ ತನಿಖಾ ವರದಿ;
2. 1996-97ನೇ ಸಾಲಿನ ಧಾರವಾಡ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಲೆಕ್ಕ ಪತ್ರಗಳ ತನಿಖೆ ವರದಿ;
3. 1996-97ನೇ ಸಾಲಿನ ಹಾಸನ ಜಿಲ್ಲಾ ಪಂಚಾಯತ್‌ನ ವಾರ್ಷಿಕ ಪತ್ರಗಳ ಮತ್ತು ತಪಾಸಣಾ ವರದಿಗಳನ್ನು ಮಂಡಿಸುತ್ತೇನೆ.

IV. ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) ಶ್ರೀ ಸಿ. ಬೈರೇಗೌಡ (ಕೃಷಿ ಮಂತ್ರಿ) ರವರ ಪರವಾಗಿ : ಅಧ್ಯಕ್ಷರೆ,

1956ರ ಕಂಪನಿಗಳ ಕಾಯ್ದೆಯ 519(ಎ) ಪ್ರಕರಣದ ಮೇರೆಗೆ;

1997-98ನೇ ಸಾಲಿನ ಕರ್ನಾಟಕ ಆಗ್ರೋ ಪ್ರೊಟೀನ್ಸ್ ಲಿಮಿಟೆಡ್‌ನ 23ನೇ ವಾರ್ಷಿಕ ವರದಿಯನ್ನು ಮಂಡಿಸುತ್ತೇನೆ.

V. ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) ಶ್ರೀ ಎಂ.ಎಸ್. ಪಾಟೀಲ್ (ನಗರಾಭಿವೃದ್ಧಿ ಮಂತ್ರಿ) ರವರ ಪರವಾಗಿ :

ಅಧ್ಯಕ್ಷರೇ,

1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5) ಹಾಗೂ 49ನೇ ಪ್ರಕರಣದ ಮೇರೆಗೆ;

1. 1998-99ನೇ ಸಾಲಿನ ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರಗಳ ವಾರ್ಷಿಕ ವರದಿ;
2. 1998-99ನೇ ಸಾಲಿನ ವಿಜಾಪುರ ನಗರಾಭಿವೃದ್ಧಿ ಪ್ರಾಧಿಕಾರದ ವಾರ್ಷಿಕ ವರದಿ;

3. 1997-98ನೇ ಸಾಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಲೆಕ್ಕಪರಿಶೋಧನಾ ವರದಿಗಳನ್ನು ಮಂಡಿಸುತ್ತೇನೆ.

VI. ಶ್ರೀ ಬಿ.ಎನ್. ಬಚ್ಚೇಗೌಡ (ಸಾರಿಗೆ ಸಚಿವರು) : ಶ್ರೀ ಬಿ.ಎ. ಮೊಯಿದ್ದೀನ್ (ಉನ್ನತ ಶಿಕ್ಷಣ ಮಂತ್ರಿ) ರವರ ಪರವಾಗಿ

ಅಧ್ಯಕ್ಷರೇ, 1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ 45(2)ನೇ ಪ್ರಕರಣದ ಮೇರೆಗೆ;

1. 1997-98ನೇ ಸಾಲಿನ ಬೆಂಗಳೂರು ವಿಶ್ವವಿದ್ಯಾನಿಲಯದ 33ನೇ ವಾರ್ಷಿಕ ವರದಿ
2. 1997-98ನೇ ಸಾಲಿನ ಮಂಗಳೂರು ವಿಶ್ವವಿದ್ಯಾಲಯದ ವಾರ್ಷಿಕ ವರದಿಗಳನ್ನು ಮಂಡಿಸುತ್ತೇನೆ.

ಅರ್ಜಿಗಳನ್ನೊಪಿಸುವುದು

ಶ್ರೀ ಎಸ್. ಸುರೇಶ್ ಕುಮಾರ್ (ರಾಜಾಜಿನಗರ) : ಮಾನ್ಯ ಸಭಾಧ್ಯಕ್ಷರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದ ಶ್ರೀ ಹೆಚ್. ಸಂಜೀವಶೆಟ್ಟಿಯವರನ್ನು ಪ್ರಥಮ ದರ್ಜೆಯ ಸಹಾಯಕ ಹುದ್ದೆಗೆ ಪುನರ್ ನೇಮಕಗೊಳಿಸುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

(ಶ್ರೀ ಡಿ.ಕೆ. ಶಿವಕುಮಾರ್ (ಕನಕಪುರ) : ಮಾನ್ಯ ಸದಸ್ಯರು ಗೈರುಹಾಜರಿದ್ದರು)

ಶ್ರೀ ಯು.ಬಿ. ಬಣಕಾರ್ (ಹಿರೆಕೆರೂರ್) : ಮಾನ್ಯ ಸಭಾಧ್ಯಕ್ಷರೆ, ಶ್ರೀ ಜೆ.ಎಸ್. ಶಿರೋಳ, ನಿವೃತ್ತ ಶಿಕ್ಷಕರು, ಇವರಿಗೆ ಸ್ಥಗಿತ ವೇತನ ಬಡ್ತಿಗಳನ್ನು ನೀಡುವ ಬಗ್ಗೆ ಅರ್ಜಿಯನ್ನು ಒಪ್ಪಿಸುತ್ತಿದ್ದೇನೆ.

ವರದಿಗಳನ್ನೊಪ್ಪಿಸುವುದು

ಶ್ರೀ ಧರಮ್ ಸಿಂಗ್ (ಜೇವರ್ಗಿ) : ಮಾನ್ಯ ಅಧ್ಯಕ್ಷರೆ, ನಾನು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿಯ 39, 40, 41, 42, 43, ಮತ್ತು 44ನೇ ವರದಿಗಳನ್ನು ಈ ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

12.00 ಪಿ.ಎಂ.

ಅಧ್ಯಕ್ಷರು : ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಬೇಡಿಕೆಗಳ ಮೇಲೆ ಮಾತನಾಡಬೇಕಾಗಿದೆ.

ಶ್ರೀ ವಾಟಾಳ್ ನಾಗಾರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ಅದಕ್ಕೂ ಮುಂಚೆ ಒಂದು ವಿಷಯ ಹೇಳುತ್ತೇನೆ. ನಾವು ಎಲ್ಲಾ ಕಡೆಯಿಂದ ಸಂಗ್ರಹ ಮಾಡಿರುವ ಕಾರ್ಗಿಲ್ ಪರಿಹಾರ ನಿಧಿಯನ್ನು ಇನ್ನು ಐದು ನಿಮಿಷದಲ್ಲಿ ನಾನು ತಮಗೆ ಅರ್ಪಿಸುತ್ತೇನೆ. ತಾವು ಅಲ್ಲಿಗೆ ಬರಬೇಕು. ಈಗ ನಮ್ಮ ಪಕ್ಷದ ಪರವಾಗಿ ನಾನು ಸ್ವತಃ 10 ಸಾವಿರ ರೂಪಾಯಿಗಳ ಚೆಕ್ ಅನ್ನು ನಿಮಗೆ ಇಲ್ಲಿ ಕೊಡುತ್ತಿದ್ದೇನೆ.